ಮೈಸೂರು ವಿಶ್ವವಿದ್ಯಾನಿಲಯ

ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು–5

ಸಂ : ದೈ.ಶಿ.ವಿ./ 166 /2019–2020 ದಿನಾಂಕ : 12–07–2019

ಪ್ರಾಂಶುಪಾಲರು/ಮುಖ್ಯಸ್ಥರು,
ವಿವಿಧ ಸಂಯೋಜಿತ, ನಿಯೋಜಕ ಕಾಲೇಜುಗಳು
ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರಗಳು
ಮೈಸೂರು ವಿಶ್ವವಿದ್ಯಾನಿಲಯ

ಮಾನ್ಯರೆ,

ವಿಷಯ : ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಅರ್ಹತಾ ನಿಯಮ ಬಗ್ಗೆ.

ಉಲ್ಲೇಖ : 1) ದಿನಾಂಕ : 26–06–2019 ರಂದು ನಡೆದ ವಿಶ್ವವಿದ್ಯಾನಿಲಯದ ಸಂಯೋಜಿತ, ನಿಯೋಜಕ ಕಾಲೇಜುಗಳು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರಗಳ ಪ್ರತಿನಿಧಿಗಳ ಸಭೆಯ ನಡಾವಳಿ
2) ಈ ಕಛೇರಿಯ ಪತ್ರ ಸಂಖ್ಯೆ/30/ದಿನಾಂಕ : 27–06–2019
3) ದಿನಾಂಕ : 10–06–2019 ರಂದು ನಡೆದ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿಯ ನಿರ್ಣಯ

* * * * *

ಮೇಲೆ ಸೂಚಿಸಿರುವ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ದಿನಾಂಕ : 10–07–2019 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿಯ ಅವಗಾಹನೆಗಾಗಿ, ಉಲ್ಲೇಖದಲ್ಲಿ ಸೂಚಿಸಿರುವ ಪ್ರತಿನಿಧಿಗಳ ಸಭೆಯಲ್ಲಿ ಅಂತರ ಕಾಲೇಜು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ **"ಅಂತರ ವಿಶ್ವವಿದ್ಯಾನಿಲಯದ ಕ್ರೀಡಾ ಸ್ಪರ್ಧೆಗಳಿಗೆ ಭಾರತೀಯ ವಿಶ್ವವಿದ್ಯಾನಿಲಯಗಳ ಮಹಾ ಸಂಘವು ನಿಗದಿಪಡಿಸಿರುವ ಅರ್ಹತಾ ನಿಯಮಗಳನ್ನು ಯಥಾವತ್ತಾಗಿ ನಿಗದಿಪಡಿಸಬೇಕು"** ಎಂದು ನಿರ್ಣಯಿಸಿರುವ ವಿಷಯವನ್ನು ಮಂಡಿಸಲಾಯಿತು.

ವಿಶ್ವವಿದ್ಯಾನಿಲಯ ಕ್ರೀಡಾ ಸಮಿತಿಯು ದೈಹಿಕ ಶಿಕ್ಷಣ ಪ್ರತಿನಿಧಿಗಳ ಸಭೆಯ ಈ ಶಿಫಾರಸನ್ನು ಒಪ್ಪಿ, 2019–20ನೇ ಸಾಲಿನ ಶೈಕ್ಷಣಿಕ ವರ್ಷದ ಅಂತರ ಕಾಲೇಜು ಕ್ರೀಡಾ ಚಟುವಟಿಕೆಗಳಿಂದಾರಂಭಿಸಿ, ಇನ್ನು ಮುಂದೆ ಭಾರತೀಯ ವಿಶ್ವವಿದ್ಯಾನಿಲಯಗಳ ಮಹಾ ಸಂಘದ ನಿಯಮಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲು ಸಮ್ಮತಿಸಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿನಿಧಿಗಳ ಸಭೆಯ ನಡಾವಳಿಗಳನ್ನು ಈ ಕಛೇರಿಯ ಪತ್ರ ಸಂಖ್ಯೆ/30/ದಿನಾಂಕ : 27–06–2019, ತಮಗೆ ಕಳುಹಿಸಲಾಗಿದೆ. ವಿಶ್ವವಿದ್ಯಾನಿಲಯ ಕ್ರೀಡಾ ಸಮಿತಿಯ ಈ ನಿರ್ಧಾರವನ್ನು ತಮ್ಮ ಶಿಕ್ಷಣ ಸಂಸ್ಥೆಯ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ಅಧಿಕಾರಿಯ ಗಮನಕ್ಕೆ ತಂದು, ಈ ಶೈಕ್ಷಣಿಕ ವರ್ಷದಿಂದ ಅರ್ಹ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಸ್ಪರ್ಧೆಗಳಿಗೆ ಆಯ್ದು, ಪ್ರಾಂಶುಪಾಲರು ಸಹಿ ಮಾಡಿರುವ ಅರ್ಹತಾ ಪತ್ರದೊಂದಿಗೆ ಕಳುಹಿಸಿಕೊಡಬೇಕೆಂದು ವಿನಂತಿಸುತ್ತೇನೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ
12/7/2019
(ಡಾ. ಪಿ. ಕೃಷ್ಣಯ್ಯ)
ನಿರ್ದೇಶಕರು

ನಿರ್ದೇಶಕರು
ದೈಹಿಕ ಶಿಕ್ಷಣ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು - 570 005

D/Kri-No. 289